ಕಸಿದುಕೊಂಡು 'ಪಾಪ! ನಿಮ್ಮ ಹುಡುಗನಿಗೆ ಇದೆಲ್ಲ ಹೇಗೆ ಗೊತ್ತು? ಇಂಥದ್ದಕ್ಕೆಲ್ಲ ಹೊಡೆಯುವುದಲ್ಲ, ಕುಳಿತು ಬುದ್ಧಿ ಹೇಳಬೇಕು' ಎಂದವರೇ ಆ ಕೋಲನ್ನು ದೂರ ಎಸೆದು ಒಳಗೆ ಹೋಗಿ ಒಂದು ರೂಪಾಯಿಯ ಪಾವಲಿಯನ್ನು ಹಿಡಿದುಕೊಂಡು ಬಂದು, ಸಾದಿಕ್‌ನ ಅಂಗೈಯಲ್ಲಿ ಇರಿಸಿ 'ಇನ್ನು ಮುಂದೆ ಇಂಥ ಕೆಲಸ ಮಾಡಬೇಡ ಮಗೂ' ಎಂದು ಅವನ ತಲೆ ನೇವರಿಸಿದರು. ಬಿಕ್ಕಳಿಸುತ್ತಿದ್ದ ಸಾದಿಕ್ ಸಣ್ಣಗೆ ನಕ್ಕು ತಲೆಯಾಡಿಸಿದ.

ಅಷ್ಟರಲ್ಲಿ ಅಬೂಬಕ್ಕರ್ ಸಹಜ ಸ್ಥಿತಿಗೆ ಬಂದಿದ್ದ ಅವನು ಮಾಸ್ತರರಿಗೆ ಕೈಮುಗಿದು ಮೌನವಾಗಿ ತನ್ನ ಮನೆಗೆ ಮರಳಿದ.

ಮರುದಿನ ಶಾಲೆಗೆ ಹೊರಟು ಬಂದ ಸಾದಿಕ್ ದುಗ್ಗೋಜಿ ಮಾಸ್ತ್ರಿಗೆ 'ನಿನ್ನೆ ರಾತ್ರೆ ನಮ್ಮ ಅಪ್ಪ ಎಲ್ಲರಿಗೂ ಒಂದೊಂದು ರೂಪಾಯಿ ಕೊಟ್ಟಿದ್ದಾರೆ ಸರ್. ನೋಡಿ ಈಗ ನನ್ನ ಕೈಯಲ್ಲಿ ಎರಡು ರೂಪಾಯಿಗಳು ಇವೆ' ಎಂದು ಮುಗುಳ್ನಕ್ಕ.

ದುಗ್ಗೋಜಿ ಮಾಸ್ತ್ರು ನಗುತ್ತಾ 'ನಾನು ಕೊಟ್ಟ ದುಡ್ಡನ್ನಷ್ಟೇ ಈ ದಿನದ ಜಾತ್ರೆಯಲ್ಲಿ ನೀನು ಖರ್ಚು ಮಾಡಬೇಕು. ನಿನ್ನ ಅಪ್ಪ ಕೊಟ್ಟ ಆ ದುಡ್ಡು ಬರುವ ವರುಷಕ್ಕಾಯಿತು' ಎಂದರು.

ನೀಲಮ್ಮ ತನ್ನ ಮನೋಪಟಲದಲ್ಲಿ ಮೂಡಿದುದನ್ನು ಗಂಡನಿಗೆ ಹೇಳಿದರು. ದುಗ್ಗೋಜಿ ಮಾಸ್ತ್ರು 'ಹೌದು. ಆ ಮೇಲೆ ಆತ ಕದ್ದ ಎಂಬ ಮಾತು ನಾನು ಕೇಳಲಿಲ್ಲ' ಎಂದರು.

ಅಷ್ಟರಲ್ಲಿ ಅಬೂಬಕ್ಕರ್ ಸೈಕಲ್ ತುಳಿದು ಡೈರಿಗೆ ಹೋಗಿ ಹಾಲು ಹಾಕಿ ಬಂದಿದ್ದ. ಮಾಸ್ತ್ರು 'ತುಂಬಾ ಧನ್ಯವಾದಗಳು ಸಾಹೇಬರೇ' ಎಂದು ಮುಗುಳ್ನಕ್ಕರು.

ಮುಂದಿನ ಮೂರು ತಿಂಗಳ ಕಾಲ ಈ 'ಕಥೆ' ಮುಂದುವರಿಯಿತು. ಅದೇ ಸುಮಾರಿಗೆ ದುಗ್ಗೋಜಿ ಮಾಸ್ತ್ರು ಬೆನ್ನು ನೋವೂ ತುಸು ಕಡಿಮೆಯಾಯಿತು. ಅಷ್ಟರಲ್ಲಿ ಅವರಲ್ಲಿದ್ದ ದನಗಳನ್ನು ಸಾಕುವ ಹುಚ್ಚೂ ಕಡಿಮೆಯಾಗಿತ್ತು. ಅವರು ಅನಿವಾರ್ಯ ಎಂಬಂತೆ ದನಗಳನ್ನು ಮಾರಿದರು. ಅಬೂಬಕ್ಕರ್‌ಗೆ 'ಇದು ಕೂಲಿಯಲ್ಲ ಸಂಭಾವನೆ' ಎಂದು ಐದು ನೂರು ರೂಪಾಯಿಗಳನ್ನು ನೀಡಲು ಮುಂದಾದರು. ಆದರೆ ಅವನು ಅದನ್ನು ಸ್ವೀಕರಿಸಲಿಲ್ಲ.

ಮೊನ್ನೆ ಮೊನ್ನೆ ಅಂದರೆ ತಿಂಗಳ ಹಿಂದೆ - ಸಾದಿಕ್ ದುಬೈಯಲ್ಲಿ ಡ್ರೈವರ್ ಆಗಿದ್ದವನು – ಎರಡು ವರುಷದ ಮೇಲೆ ಊರಿಗೆ ಮರಳಿ ಬಂದ. ಮರುದಿವಸವೇ 'ದುಗ್ಗೋಜಿ ಮಾಸ್ತ್ರನ್ನು ನೋಡಬೇಕು' ಎಂದು ಮಾಸ್ತ್ರಲ್ಲಿಗೆ ಬಂದ. 'ಹೇಗಿದ್ದೀರಾ?' ಎಂದು ಅವನನ್ನು ವಿಚಾರಿಸಿದ ದುಗ್ಗೋಜಿ ಮಾಸ್ತ್ರು ಬಹಳ ಹೊತ್ತು ಶಿಷ್ಯನಲ್ಲಿ ಹರಟುತ್ತಾ ಕುಳಿತರು. ಹೊರಟು ನಿಂತ ಸಾದಿಕ್ 'ಈಗ ನಿಮ್ಮ ದನಗಳು ಹೇಗಿವೆ ಸರ್?' ಹಾಲು ಹಿಂಡುತ್ತೀರಾ ಹೇಗೆ?' ಎಂದು ಪ್ರಶ್ನಿಸಿದ.

ದುಗ್ಗೋಜಿ ಮಾಸ್ತ್ರು 'ದನಗಳನ್ನೆಲ್ಲ ಮಾರಿಬಿಟ್ಟೆ ಮಗು' ಎಂದು ಅದರ ಕಾರಣ ವಿವರಿಸಿ 'ನಿನ್ನ ತಂದೆ ನಮ್ಮ ಕಷ್ಟದ ದಿನಗಳಲ್ಲಿ ನೀಡಿದ ನೆರವು ದೊಡ್ಡದು. ನಾನು ಹಾಲು ಹಿಂಡಬಾರದು, ಹೆಚ್ಚು ಶ್ರಮ ವಹಿಸಬಾರದು ಎಂದು ವೈದ್ಯರು ಹೇಳಿದ ಪ್ರಕಾರ ಹೈನೋದ್ಯಮವನ್ನೇ ಬಿಟ್ಟು ಬಿಟ್ಟೆ. ಈಗ ದಿನಾ ಡೈರಿಗೆ ನಾನೇ ಹೋಗಿ ಅರ್ಧ ಲೀಟರ್ ಹಾಲು ತರುತ್ತಿದ್ದೇನೆ. ಹೆಚ್ಚು ತಂದರೆ ಸ್ಟೋರೇಜಿನ ಸಮಸ್ಯೆ ಇದೆಯಲ್ವಾ? ನಾವು ಇಬ್ಬರೇ ಇರುವುದರಿಂದ ಫ್ರಿಡ್ಜ್ ಇಟ್ಟುಕೊಂಡಿಲ್ಲ' ಎಂದರು.

ಸಾದಿಕ್ 'ಛೆ! ಛೆ! ಇಷ್ಟೆಲ್ಲ ಕಷ್ಟ ನಿಮಗೆ ಆದದ್ದು ನನಗೆ ಗೊತ್ತಿರಲಿಲ್ಲ ಸರ್' ಎಂದು ದುಃಖ ತೋಡಿಕೊಂಡು ಹೊರಟು ಹೋದ.

ಮರುದಿನ ದುಗ್ಗೋಜಿ ಮಾಸ್ತ್ರು ಸಂಜೆ ಚಾವಡಿಯಲ್ಲಿ ಹೆಂಡತಿಯೊಂದಿಗೆ ಹರಟುತ್ತಾ ಕುಳಿತುಕೊಂಡ ಹೊತ್ತಿಗೆ ಒಂದು ಟೆಂಪೋ ಅವರ ಅಂಗಳಕ್ಕೆ ಬಂತು. ಇದು ಯಾಕೆ ಬಂತು? ಎಂದು ಕುತೂಹಲದಲ್ಲಿ ಅವರು ಅಂಗಳಕ್ಕೆ ಇಳಿದಾಗ ಸಾದಿಕ್ ಟೆಂಪೋದಿಂದ ಇಳಿದು, 'ನಿಮಗಾಗಿ ಗಿಫ್ಟ್ ರೂಪದಲ್ಲಿ ಒಂದು ಫ್ರಿಡ್ಜ್ ತಂದಿದ್ದೇನೆ ಸರ್. 'ಬೇಡ' ಅನ್ನಬಾರದು. ಈ ಇಳಿವಯಸ್ಸಿನಲ್ಲಿ ನೀವು ದಿನಾ ಹಾಲಿಗಾಗಿ ಡೈರಿಗೆ ಹೋಗಿ ಬರುವುದು ಸರಿಯಲ್ಲ. ನೀವು ಒಮ್ಮೆಲೇ ಒಂದೋ ಎರಡೋ ಲೀಟರ್ ಹಾಲು ತೆಗೆದುಕೊಂಡು ಈ ಫ್ರಿಡ್ಜ್‌ನಲ್ಲಿಟ್ಟರೆ, ನೀವು ದಿನಾ ಸೀತಾಪುರಕ್ಕೆ ಹೋಗಿ ಬರುವ ಕಷ್ಟ ಮತ್ತು ಆಯಾಸ ಇಲ್ಲವಾಗುತ್ತದೆ' ಎಂದ.

ದುಗ್ಗೋಜಿ ಮಾಸ್ತ್ರು ಟೆಂಪೋದಿಂದ ಫ್ರಿಡ್ಜ್ ಇಳಿಸುವವರನ್ನು ತಡೆದು ನಿಲ್ಲಿಸಿದರು. ಆ ಮೇಲೆ